(2317), ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ)

ಅ) ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಮಂಜೂರಾಗಿರುವ ಹೆಚ್ಚುವರಿ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು;

ಆ) ಈ ಕಾಮಗಾರಿಗಳನ್ನು ಯಾವ ಯಾವ ಗುತ್ತಿಗೆದಾರರಿಗೆ ಗುತ್ತಿಗೆ ವಹಿಸಲಾಗಿದೆ;

ಇ) ಈ ಕಾಮಗಾರಿಗಳು 2009–10 ಮತ್ತು 2010–11ರಲ್ಲಿ ಮಂಜೂರಾಗಿದ್ದರೂ ಕೂಡ ಇದುವರೆಗೆ ಕಾಮಗಾರಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸದೇ ಇರುವುದಕ್ಕೆ ಕಾರಣಗಳೇನು(ವಿವರ ನೀಡುವುದು);

ಈ) ಕೆಲವು ಕಾಮಗಾರಿಗಳು ಪ್ರಾರಂಭವಾಗಿ ಅರ್ಧದಲ್ಲಿಯೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾಮಗಾರಿ ವಿಳಂಬದ ಬಗ್ಗೆ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ಶಾಲಾ ಕೊಠಡಿಗಳ ಅಭಾವದಿಂದ ವಿದ್ಯಾರ್ಥಿಗಳು ನೆಲದ ಮೇಲೆ ಕುಳಿತುಕೊಳ್ಳುವ ಪರಿಸ್ಥಿತಿ ಉದ್ಭವವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ)
- ಪ್ರೌಢಶಾಲೆಗಳ ಬಲವರ್ಧನೆ 06 ಶಾಲೆಗಳು
- ಉನ್ನತೀಕರಿಸಿದ ಹೊಸ ಪ್ರೌಢಶಾಲೆಗಳ ಕಟ್ಟಡ 03 ಶಾಲೆಗಳು
- ಆದರ್ಶ ವಿದ್ಯಾಲಯ 01 ಶಾಲೆ
- ಹೆಣ್ಣುಮಕ್ಕಳ ವಸತಿ ನಿಲಯ 01 ಶಾಲೆ

ಆ) ಈ ಕಾಮಗಾರಿಗಳನ್ನು ಎನ್.ಸಿ.ಸಿ. ಲಿ., ಬೆಂಗಳೂರು ಇವರಿಗೆ ಗುತ್ತಿಗೆ ನೀಡಲಾಗಿದೆ.

ಇ) ಸ್ಥಳದ ಅಭಾವ, ಗುತ್ತಿಗೆದಾರರು ಕಾಮಗಾರಿ ಪ್ರಾರಂಭ ಮಾಡದೇ ಇರುವುದು ಮತ್ತು ಇತರೆ ತಾಂತ್ರಿಕ ಕಾರಣಗಳಿಂದ ನಿಗಧಿತ ಅವಧಿಯೊಳಗೆ ಕಾರ್ಯ ಆಗದೇ ವಿಳಂಬವಾಗಿದ್ದು ಈ ಸಮಸ್ಯೆಗಳನ್ನು ಬಗೆಹರಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಬಂದಿದೆ.

ವಿಳಂಬವಾಗಿರುವ ಕಾಮಗಾರಿಗಳ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಆದೇಶಿಸಲಾಗಿದೆ.

ಉ) ಬಂದಿದೆ.

ಈ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಿ ಇಲಾಖೆಗೆ ಕಟ್ಟಡವನ್ನು ಹಸ್ತಾಂತರಿಸಲು ತಿಳಿಸಿದೆ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಟ್ಟು 12.50 ಕೋಟಿ ರೂಪಾಯಿಗಳ ಕೆಲಸ. ನಾನು ಶಿಕ್ಷಣ ಸಚಿವರಿಗೆ ಕೇಳುವಂಥದ್ದು, ಯಾವ ಯಾವ ಕಾಮಗಾರಿಗಳನ್ನು ಯಾವ ಯಾವ ಕಂಪನಿಗಳಿಗೆ ವಹಿಸಿಕೊಟ್ಟಿದ್ದೀರಿ? ಯಾವ ದಿನಾಂಕದಿಂದ ವಹಿಸಿಕೊಟ್ಟಿದ್ದೀರಿ? ಎರಡನೇಯದಾಗಿ ಕಾಮಗಾರಿ ಮುಗಿಸುವುದಕ್ಕೆ ಟೆಂಡರ್ ಕಂಡೀಷನ್ಸ್ ಪ್ರಕಾರ ಕಾಲಾವಧಿ ಎಷ್ಟು ನಿಗಧಿ ಮಾಡಿದ್ದೀರಿ?

ಅಧ್ಯಕ್ಷರು: ಉತ್ತರದಲ್ಲಿ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ.ಕಾರಜೋಳ: ಮೂರನೆಯದಾಗಿ, ಗುತ್ತಿಗೆದಾರರು ವಿಳಂಬ ಮಾಡಿದ್ದರಿಂದ cost ಹೆಚ್ಚಾಗುತ್ತದೆ, escalation ಆಗುತ್ತದೆ. ಸುಮಾರು 12 ಕೋಟಿ ರೂಪಾಯಿ ಕೆಲಸ 18 ಕೋಟಿ ರೂಪಾಯಿಗಳಾಗುತ್ತದೆ. ಈ ಹೆಚ್ಚಿನ ಮೊತ್ತವನ್ನು ಯಾವ ರೀತಿ ಭರಿಸುತ್ತೀರಿ?

ಅಧ್ಯಕ್ಷರು: ಕಾರಜೋಳರವರೆ, supplementary ಕೇಳುವ ಬಗೆಯೇ ಇದು?

ಶ್ರೀ ಗೋವಿಂದ ಎಂ.ಕಾರಜೋಳ: ಒಂದು ಬಾರಿ ಉತ್ತರ ಹೇಳಿಬಿಡಲಿ. ಮತ್ತೆ ಏಕೆ ಅವರಿಗೂ ತೊಂದರೆ.

ಅಧ್ಯಕ್ಷರು: ಈ ರೀತಿಯಾಗುವುದಿಲ್ಲ. ಒಂದೊಂದೇ ಪ್ರಶ್ನೆಯನ್ನು ಕೇಳಿ. ಉತ್ತರ ಹೇಳುತ್ತಾರೆ.

ಶ್ರೀ ಗೋವಿಂದ ಎಂ.ಕಾರಜೋಳ: ಹೆಚ್ಚಾದ ಮೊತ್ತವನ್ನು ಗುತ್ತಿಗೆದಾರರಿಂದ ವಸೂಲು ಮಾಡುವುದಕ್ಕೆ ಟೆಂಡರ್‌ಅನ್ನು resend ಮಾಡಿ risk & cost ಮಾಡುತ್ತೀರೋ ಹೇಗೆ?

ಅಧ್ಯಕ್ಷರು: ಒಂದು ಕಂಟ್ರಾಕ್ಟ್‌ನ್ನು terminate ಮಾಡಿ ಹೊಸದಾಗಿ ಕಟ್ಟುವುದಕ್ಕೆ ಕೊಡಬೇಕಾದರೆ ಅದರ existing code rules ಇದೆ. ಆಯಿತು, ಸಾಕು ತಾವು ಕುಳಿತುಕೊಳ್ಳಿ. ಉತ್ತರ ಹೇಳುತ್ತಾರೆ ಕೇಳಿ.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಸಭಾಧ್ಯಕ್ಷರೆ, ಗೌರವಾನ್ವಿತ ಹಿರಿಯ ಸದಸ್ಯರು ಪ್ರಶ್ನೆ ಕೇಳಿದ್ದು almost agreementನ್ನೇ ತಂದು ಇಲ್ಲಿಡುವಂಥ ಪರಿಸ್ಥಿತಿಯಲ್ಲಿದೆ. ಆದ್ದರಿಂದ, ಪ್ರಶ್ನೆ ಚಿಕ್ಕದಿದ್ದರೂ ಸಹ ವಿಸ್ತಾರವಾಗಿದೆ. ಒಂದಂತೂ ಸತ್ಯ, ಈಗಾಗಲೇ ಏನು agreement ಆಗಿದೆ ಅದರ ಮೂಲ ದಾಖಲೆಗಳು, ಅದಕ್ಕೆ ಸಂಬಂಧಪಟ್ಟದ್ದನ್ನು ತಮಗೆ ಒದಗಿಸುವಂಥ ಪ್ರಯತ್ನ ನಾನು ಮಾಡುತ್ತೇನೆ. ಏನು agreement ಇದೆ ಅದನ್ನು ಸಹ, ಆದರೆ, it is a state wide, ಇದು single tenderನಲ್ಲಿ ಆಗಿರುವುದ್ದಾಗಿರುವುದರಿಂದ ನೀವು ಏನು ಪ್ರಶ್ನೆಯನ್ನು ಕೇಳಿದ್ದೀರಿ ಅದಕ್ಕೆ ಉತ್ತರಿಸುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ: ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ದೊಡ್ಡ ದುರಂತವೇನೆಂದರೆ ಬೆಂಗಳೂರಿನ ಮಾನಸ ಎನ್ನುವಂಥ private consultantಗೆ ಕೊಟ್ಟಿದ್ದಾರೆ.

ಅಧ್ಯಕ್ಷರು: ಯಾರು ಕೊಟ್ಟವರು?

ಶ್ರೀ ಗೋವಿಂದ ಎಂ.ಕಾರಜೋಳ: ಯಾರೇ ಕೊಟ್ಟಿರಲಿ, ಸರ್ಕಾರ ಕೊಟ್ಟಿದೆ. ನಾನೇ ಎಂದು ತಿಳಿದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಕೆದಕುವುದಕ್ಕೆ ಹೋಗಬೇಡಿ.

ಶ್ರೀ ಕೆ.ಗೋಪಾಲ ಪೂಜಾರಿ: ನಿಮ್ಮ ಕಾಲದಲ್ಲಿ ಆಗಿರುವುದು, ನಿಮ್ಮ ಕಾಲದಲ್ಲಿ ಇಡೀ ರಾಜ್ಯದಲ್ಲಿ ತೊಂದರೆಯಾಗಿದೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ಯಾರು ಕೊಟ್ಟಿದ್ದಾರೆ ಎನ್ನುವುದು ಮುಖ್ಯವಲ್ಲ. ಸರ್ಕಾರ ಕೊಟ್ಟಿದೆ.

(ಗೊಂದಲ)

ಅಧ್ಯಕ್ಷರು: ಬೇಗ ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನಸ ಎನ್ನುವಂಥ consultantಗೆ ಕೊಟ್ಟಿದ್ದಾರೆ. ಅವರು ಬೆಂಗಳೂರಿನವರು, ಇವರು ಬಂದು ಅಲ್ಲಿ supervision ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲಸವನ್ನು ಮುಗಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಗೋಪಾಲ ಪೂಜಾರಿ: ಯಾರ ಕಾಲದಲ್ಲಿ ಆಗಿದೆ ಎನ್ನುವುದನ್ನು ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ: ಅದಕ್ಕಾಗಿ ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ಈಗಾಗಲೇ ಅವಧಿ ಮುಗಿದು ಹೋಗಿದೆ. ಕೂಡಲೇ

ಟೆಂಡರ್‌ಅನ್ನು resend ಮಾಡಿ. ನೀವು risk & cost ಮಾಡುತ್ತೀರೋ ಅಥವಾ ಸರ್ಕಾರವೇ ವಹಿಸಿಕೊಳ್ಳುತ್ತದೆಯೋ ಎನ್ನುವುನ್ನು ನೋಡಿ, ಸರ್ಕಾರವೇ ವಹಿಸಿಕೊಂಡು ಕೂಡಲೇ 6 ತಿಂಗಳೊಳಗೆ ಕಟ್ಟಡಗಳನ್ನು ಮುಗಿಸಿಕೊಡಿ. ಏಕೆಂದರೆ, ಮಕ್ಕಳು 12 ಕಡೆ ಹೊರಗಡೆ ಕುಳಿತಿದ್ದಾರೆ. ಇದು ನನ್ನ ಕ್ಷೇತ್ರವಷ್ಟೇ ಅಲ್ಲ, ನಿಮ್ಮ ಕ್ಷೇತ್ರದನ್ನೂ ಸೇರಿಸಿ ಹೇಳಿದ್ದೇನೆ. ಇದರಲ್ಲಿ ನಿಮ್ಮದು 2 ಶಾಲೆಗಳಿವೆ.

ಅಧ್ಯಕ್ಷರು: ಸ್ವಲ್ಪ ತಾಳ್ಮೆ ವಹಿಸಿ, ಸಚಿವರು ಉತ್ತರ ಹೇಳಲಿ.

ಶ್ರೀ ಕಿಮ್ಮನೆ ರತ್ನಾಕರ್: ಅವರು ಹೇಳುತ್ತಿರುವುದರಲ್ಲಿ ಅರ್ಧಕ್ಕೆ ಅರ್ಧ ಸತ್ಯವಿದೆ. ಅವರು ಕಾರ್ಯನಿರ್ವಹಿಸುತ್ತಿರುವುದು ನನಗೆ ಸಮಾಧಾನವಿಲ್ಲ. ಈಗಾಗಲೇ ಇದರ ಬಗ್ಗೆ ನಾನು ಸಂಬಂಧಪಟ್ಟವರಿಗೆ ತಿಳುವಳಿಕೆ ಕೊಟ್ಟಿದ್ದೇನೆ. 6 ತಿಂಗಳೊಳಗೆ ನೀವು ಕೆಲಸ ಮಾಡಿ ಮುಗಿಸದೇ ಇದ್ದರೆ, ಖಂಡಿತವಾಗಿ ನಾವು ಇದನ್ನು ರದ್ದು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂಥ ಒಂದು ತಿಳುವಳಿಕೆಯನ್ನು ಖುದ್ದು ಕರೆಸಿ ಕೊಟ್ಟಿದ್ದೇವೆ.

ಅಧ್ಯಕ್ಷರು: ತಿಳುವಳಿಕೆಯಲ್ಲ, final notice ಕೊಡಬೇಕು. ಆಖೈರು notice.

ಶ್ರೀ ಗೋವಿಂದ ಎಂ.ಕಾರಜೋಳ: Resend notice ಕೊಡಿ. ಅಕಸ್ಮಾತ್ ಅವರು ಚೂರು-ಪಾರು ಕೆಲಸ ಮಾಡಿದ್ದಾರೆಂದರೆ final measurement ತಗೊಂಡು ಕ್ಲೋಸ್ ಮಾಡಿ.

(ಗೊಂದಲ)

ಶ್ರೀ ಕೆ.ಗೋಪಾಲ್ ಪೂಜಾರಿ: ಇಡೀ ರಾಜ್ಯದಲ್ಲಿದೆ, ಇದು ಇಡೀ ರಾಜ್ಯದ ಸಮಸ್ಯೆ.

ಅಧ್ಯಕ್ಷರು: ಇದು ಇಡೀ ರಾಜ್ಯದಲ್ಲಿ ಆಗಿರುವಂಥ ಕೆಟ್ಟ ಸ್ಥಿತಿ. ಅಲ್ಲಿ ಕೆಲವು ಹುಳುಗಳು ಸೇರಿಕೊಂಡಿವೆ. ಮೊನ್ನೆ ಒಬ್ಬನನ್ನು ಕಳುಹಿಸಿದ್ದೀರಿ.

ದಯವಿಟ್ಟು ಅಲ್ಲಿರುವಂಥ ಹುಳುಗಳನ್ನೆಲ್ಲಾ ಓಡಿಸಿ ಹೊಸದಾಗಿ ಒಂದು ವ್ಯವಸ್ಥೆ ಮಾಡಿ.

ಶ್ರೀ ಕಿಮ್ಮನೆ ರತ್ನಾಕರ್: ಇನ್ನು 5 ತಿಂಗಳುಗಳಲ್ಲಿ ಅದನ್ನು ಪೂರ್ಣ ಸರಿಪಡಿಸುತ್ತೇನೆ.

ಶ್ರೀ ಇ.ತುಕಾರಾಂ: ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ರಾಜ್ಯಾದ್ಯಂತ ಒಂದು contract ಆಗಿದೆ. ಅಲ್ಲಿಂದ ಮತ್ತೆ ಜಿಲ್ಲಾ ಮಟ್ಟಕ್ಕೆ ಒಬ್ಬರಿಗೆ ಕೊಟ್ಟಿದ್ದಾರೆ, ಮತ್ತೆ ತಾಲ್ಲೂಕು ಮಟ್ಟಕ್ಕೆ ಒಬ್ಬರಿಗೆ ಕೊಟ್ಟಿದ್ದಾರೆ. ಇದೊಂದು ದೊಡ್ಡ ಹಗರಣ ನಡೆದಿದೆ.

ಅಧ್ಯಕ್ಷರು: ಇದನ್ನು ಏಕೆ ಹೇಳುತ್ತಿದ್ದೀರಿ? ಇಡೀ ರಾಜ್ಯದ್ದನ್ನು ತೆಗೆದುಕೊಂಡು ಹೋಗಿ ಒಬ್ಬನೇ ಕಾಂಟ್ರಾಕ್ಟ್‌ದಾರನಿಗೆ ಕೊಟ್ಟರೆ ಇನ್ನೇನು ಕಥೆಯಾಗುತ್ತದೆ?

(ಗೊಂದಲ)

ಶ್ರೀ ಕೆ.ಗೋಪಾಲ್ ಪೂಜಾರಿ: ಇದೇ ದೊಡ್ಡ ಹಗರಣವಾಗಿದೆ. ಎಲ್ಲಾ ಕಡೆ ಆಗಿದೆ.

(ಗೊಂದಲ)

ಅಧ್ಯಕ್ಷರು: ಇದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಮಾಡಿರುವಂಥ ವ್ಯವಸ್ಥೆ ಸರಿಯಾಗಿಲ್ಲ. ಹೊಸದಾಗಿ ನಾವು ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಶಿವಮೂರ್ತಿ: ಆ ಟೆಂಡರ್ process ಸರಿಯಾಗಿಲ್ಲ. ಆದ್ದರಿಂದ ಟೆಂಡರ್‌ಅನ್ನು decentralize ಮಾಡಿಸಿ. Lease ಕೊಡುವುದು, ನಂತರ sub lease ಕೊಡುವುದು, ಮತ್ತೊಬ್ಬರಿಗೆ ಕೊಡುವುದು ಆಗಿದೆ.

(ಗೊಂದಲ)

ಶ್ರೀ ಕಿಮ್ಮನೆ ರತ್ನಾಕರ್: ತುಕಾರಾಂರವರೆ ಒಂದು ನಿಮಿಷ ಕುಳಿತುಕೊಳ್ಳಿ. ಪ್ರಶ್ನೆ ಕೇಳಿದಂಥ ಸಾಹೇಬರಿಗೆ ಗೊತ್ತಿದೆ. ಇದು ಅವರ ಅಧಿಕಾರ ಅವಧಿಯಲ್ಲೇ ಆಗಿದೆ.

ಅಧ್ಯಕ್ಷರು: ಈಗ ಅದನ್ನು ಕೆದಕುವುದಕ್ಕೆ ಹೋಗಬೇಡಿ, ಬಿಟ್ಟುಬಿಡಿ.

(ಗೊಂದಲ)

ಶ್ರೀ ಕಿಮ್ಮನೆ ರತ್ನಾಕರ್: ನಾನೇನು ಹೇಳುವುದಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ: ನಾನು ಸರ್ಕಾರ ಕೊಟ್ಟಿದೆ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು: ಬೇಗ ಬೇಗ ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ಸ್ಥಳವಿಲ್ಲವೆಂದು ಹೇಳಿದ್ದಾರೆ. ಸ್ಥಳದ ಅಭಾವವೇನೂ ಇಲ್ಲ. ಸ್ಥಳದ ಬಗ್ಗೆ ನಾನೇನು ಮುಂದೆ ನಿಂತು ಕೊಡಿಸುತ್ತೇನೆ. ನಾನು ಸ್ವತಃ ಬರುತ್ತೇನೆ. ಕೊಡಿಸಿದ್ದೇನೆ.

ಅಧ್ಯಕ್ಷರು: hand over ಮಾಡಿ.

ಶ್ರೀ ಕಿಮ್ಮನೆ ರತ್ನಾಕರ್: ಈ ಕಟ್ಟಡದ ಸಮಸ್ಯೆ ಏನಿದೆ, ನನಗೆ ವಾಸ್ತವದಲ್ಲಿ ಎಲ್ಲೆಲ್ಲಿ ಏನೇನು ಆಗುತ್ತಿದೆ ಎನ್ನುವ ಬಗ್ಗೆ actually 3–4 ತಿಂಗಳ ಹಿಂದೆ ಎಲ್ಲೆಲ್ಲಿ ಕೆಲಸ ನಡೆಯುತ್ತಿದೆ ನಾನೇ ಸಂಬಂಧಪಟ್ಟ ಶಾಸಕರಿಗೆ ಪತ್ರ ಬರೆದೆ. ಉದ್ದೇಶವೇನೆಂದರೆ, ಏನಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಪತ್ರ ಬರೆದೆ. Actulally, ನೀವು ಅಲ್ಲಿರುವಂಥ ಕಟ್ಟಡಗಳನ್ನು ಉದ್ಘಾಟನೆ ಮಾಡಬೇಕು ಮತ್ತು ಅದು ಏನಾಗಿದೆ ಎನ್ನುವುದನ್ನು ತಿಳುವಳಿಕೆ ಮಾಡಿ ನನಗೆ ಮಾಹಿತಿ ಕೊಡಿ ಎಂದು ಹೇಳಿದೆ. ಪತ್ರ ಬರೆದ ಉದ್ದೇಶವೇ ಎಲ್ಲಿ ಯಾವ ಪರಿಸ್ಥಿತಿಯಿದೆ ಎನ್ನುವುದನ್ನು ಅರಿವು ಮಾಡಿಕೊಳ್ಳುವುದಾಗಿತ್ತು. ನನಗೆ ಮಾಹಿತಿ ಬಂದಿದೆ. ಇನ್ನು 6 ತಿಂಗಳೊಳಗೆ

ಈ ಕೆಲಸಕ್ಕೆ ಪೂರ್ಣ ವಿರಾಮ ಹಾಕುವಂಥ ಕೆಲಸವನ್ನು ನಾನು ಮಾಡುತ್ತೇನೆ.

ಶ್ರೀ ಕೆ.ಶಿವಮೂರ್ತಿ: ಟೆಂಡರ್ system ಇದೆಯಲ್ಲ, ದಯಮಾಡಿ ಹೊರಗಡೆ ಆಂಧ್ರದವರಿಗೆ ಬೇರೆ ಬೇರೆ ರಾಜ್ಯದವರಿಗೆ ಕೊಡುತ್ತಿದ್ದಾರೆ. ನಮಗೆ ಸ್ಥಳೀಯರಿಗೆ ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕೇಳಿ, ಆ ಒಂದು ವ್ಯವಸ್ಥೆಯಾಗಿಬಿಟ್ಟಿದೆ.

ಶ್ರೀ ಕೆ.ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ನನ್ನದೊಂದು submission ಇದೆ. There is a technically difficulty ಬೇರೆ ರಾಜ್ಯದಲ್ಲಿ ಕೋರ್ಟಿಗೆ ಹೋಗಿಬಿಡುತ್ತಾರೆ. ವರ್ಷಗಟ್ಟಲೆಯಾದರೆ, education is an essential service.

(ಗೊಂದಲ)

ಶ್ರೀ ಕೆ.ಶಿವಮೂರ್ತಿ: ಟೆಂಡರ್ process conditions ಅನ್ನು amendment ಮಾಡಲಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು, amendment ಮಾಡಿ.

ಶ್ರೀ ತಿಮ್ಮರಾಯಪ್ಪ.ಕೆ.ಎಂ.

(2608), ಶ್ರೀ ತಿಮ್ಮರಾಯಪ್ಪ.ಕೆ.ಎಂ. (ಪಾವಗಡ)

ಅ) ಪಾವಗಡ ತಾಲ್ಲೂಕಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಆ) ಇದರ ಬಗ್ಗೆ ಉಚ್ಚ ನ್ಯಾಯಾಲಯದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರ ಯಾವ ಹಂತದಲ್ಲಿದೆ;